Mr. SPEAKER.—Next Question—Question No. 112. The Hon'ble Minister is absent. Next Question No. 117—the Hon'ble Minister is absent. I will come to these again. Next question Sri Samaji. Hon'ble Member is absent. The question lapses. Next question—Smt. B. L. Subbamma.

Construction of Bridges in Chickmagalur Taluk.

*Q.—166. Smt. B. L. SUBBAMMA (Chickmagalore).—

Will the Government be pleased to state :—

(*a*) the number of bridges in Chickmagalur District, the works of which were started by the P. W. D. since 1957 and left incomplete (talukwise information may be furnished);

(*b*) when the same will be completed ?

A.—Sri G.B. SHANKAR RAO (on behalf of Minister for Public Works).—

(*a*) 23 bridges as detailed below.

	Taluk	*No. of Bridges*
1	Chickmagalur	5
2	Kadur	2
3	Mudigere	7
4	Tarikere	5
5	Koppa	4
		23

(*b*) They will be completed as early as possible subject to the availability of funds.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಸ್ವಾಮಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು 23 ಸೇತುವೆಗಳ ಕೆಲಸವನ್ನು ಪ್ರಾರಂಭಿಸಿ ಅವುಗಳನ್ನು ಅರ್ಧಮರ್ಧ ಮಾಡಿ ಹಾಗೆಯೇ ನಿಲ್ಲಿಸಿದ್ದಾರೆ. ಹಣದ ಲಭ್ಯತೆಗೊಳಪಟ್ಟು ಸಾಧ್ಯವಾದಷ್ಟು ಬೇಗ ಅವುಗಳನ್ನು ಪೂರ್ತಿಮಾಡಲಾಗುವುದು ಎಂದು ಹೇಳಿದ್ದಾರೆ. ಹಾಗಾದರೆ ಆ ಸೇತುವೆಗಳ ಕೆಲಸ ಪ್ರಾರಂಭವಾದದ್ದು ಎಷ್ಟನೇ ಇಸವಿಯಲ್ಲಿ, ಇಷ್ಟು ವರ್ಷಗಳವರೆಗೂ ಆ ಕೆಲಸವನ್ನು ಮಾಡುವುದಕ್ಕೆ ಇರತಕ್ಕ ತೊಂದರೆ ಏನು ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಜಿ. ಬಿ. ಶಂಕರ ರಾವ್.—ಇದರಲ್ಲಿ 1961 ಮತ್ತು 1963 ನೇ ಇಸವಿಗಳಲ್ಲಿ ಒಟ್ಟು 23 ಸೇತುವೆಗಳ ಕೆಲಸ ಪ್ರಾರಂಭವಾಗಿವೆ. ಆ ಸೇತುವೆಗಳನ್ನು ಪೂರ್ತಿಮಾಡದೆ ಇರುವುದಕ್ಕೆ ಕಾರಣ ಸಿಮೆಂಟ್ ಸಿಕ್ಕದೇ ಇರುವುದು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ 23 ಸೇತುವೆಗಳ ಕೆಲಸವನ್ನು ಪೂರ್ತಿಮಾಡುವ ವಿಷಯದಲ್ಲಿ ನಾನು ಈಗ ಸುಮಾರು ನಾಲ್ಕು ವರ್ಷಗಳಿಂದಲೂ ಇಲ್ಲಿ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಆ ಪೈಕಿ ಒಂದು ಸೇತುವೆಯ ಕೆಲಸವನ್ನೂ ಪೂರ್ತಿ ಮಾಡದೇ ಇರುವುದಕ್ಕೆ ಕಾರಣವೇನು, ಮತ್ತು ಈ ದೇಶದಲ್ಲಿ ಇಲ್ಲಿಯವರೆಗೂ ಯಾವ ಸೇತುವೆಯ ಕೆಲಸವನ್ನೂ ಮಾಡಿಲ್ಲವೇ ?

ಶ್ರೀ ಜಿ. ಬಿ. ಶಂಕರ ರಾವ್.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಬೇಕಾದಷ್ಟು ಸೇತುವೆಗಳ ಕೆಲಸವನ್ನು ಮಾಡಿದೆ. ಈಗ ಪ್ರಾರಂಭಮಾಡಿರತಕ್ಕ ಸೇತುವೆಗಳದು 100ಕ್ಕೆ 60, 70ರಷ್ಟು ಕೆಲಸ ಆಗಿದೆ.

ಶ್ರೀಮತಿ ಬಿ. ಎರ್. ನುಬ್ಬಮ್ಮ.—ಮಲೆನಾಡು ಡೆವಲಪ್‌ಮೆಂಟ್ ಕೆಲಸಕ್ಕೆ ಸಂಬಂಧಪಟ್ಟ ಹಾಗೆ ಈ ವರ್ಷ ಪಬ್ಲಿಕ್‌ವರ್ಕ್ಸ್ ಇಲಾಖೆಯಿಂದ ಯಾವ ಹಣವನ್ನೂ ಕೊಡುವುದಿಲ್ಲ ಎಂದು ಸರ್ಕಾರದವರು ತಿಳಿಸುತ್ತಾ ಇರತಕ್ಕದ್ದು ನಿಜವೇ ?

ಶ್ರೀ ಜಿ. ಬಿ. ಶಂಕರ ರಾವ್.—ಹಣದ ಅಭಾವ ಇದೆ ಎಂದು ಹೇಳಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಚಿಕ್ಕಮಗಳೂರು ಜಿಲ್ಲೆಯಲ್ಲಿ 1961 ನೇ ಇಸವಿಯಲ್ಲಿ 23 ಸೇತುವೆಗಳ ಕೆಲಸವನ್ನು ಪ್ರಾರಂಭಮಾಡಿ ಅವುಗಳನ್ನು ಪೂರ್ತಿಮಾಡದೆ ಅರ್ಧಮರ್ಧಮಾಡಿ ಹಾಗೆಯೇ ನಿಲ್ಲಿಸಲಾಗಿದೆ, ಅವುಗಳನ್ನು ಹಣ ಬಂದಾಗ ಮಾಡುತ್ತೇವೆ ಎಂದು ಸರ್ಕಾರದವರು ಹೇಳಿದ್ದಾರೆ. ಆ ರೀತಿ ಆರಂಭವಾದ ಸೇತುವೆಗಳ ಕೆಲಸವನ್ನು ನಿಲ್ಲಿಸುವುದಕ್ಕೆ ಬಲವಾದ ಕಾರಣವೇನು, ಅದಕ್ಕೆ ಮಂಜೂರಾದ ಹಣವನ್ನು ಬೇರೆ ಯಾವುದಕ್ಕಾದರೂ ಉಪಯೋಗಿಸಿಕೊಂಡರೇ, ಹೇಗೆ ? ಅದು ಮಲೆನಾಡು ಪ್ರದೇಶವಾಗಿರುವುದರಿಂದ ಅಲ್ಲಿ ಸೇತುವೆಗಳು ಇಲ್ಲದೆ ಹೋದರೆ ಅಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡಾಡುವುದು ಕಷ್ಟ, ಆ ರೀತಿ ಪ್ರಾರಂಭಮಾಡಿದ್ದ ಸೇತುವೆಗಳ ಕೆಲಸವನ್ನು ನಿಲ್ಲಿಸುವುದಕ್ಕೆ ಏನಾದರೂ ರಾಜಕೀಯ ಕಾರಣ ಇದೆಯೇ. ಹಣ ಇಲ್ಲದೆ ಆ ಕಾರ್ಯವನ್ನು ನಿಲ್ಲಿಸಲಾಗಿದೆಯೇ ಅಥವಾ ಇನ್ನು ಯಾವುದಾದರೂ ಕಾರಣ ಇದೆಯೇ ? ಈಗ ಈ ರಾಜ್ಯದಲ್ಲಿ ಬೇರೆಯಾವ ಸೇತುವೆಗಳ ಕೆಲಸವನ್ನೂ ಪ್ರಾರಂಭ ಮಾಡಿಲ್ಲವೇ ?

ಶ್ರೀ ವೀರೇಂದ್ರಪಾಟೀಲ್.—ಇದರಲ್ಲಿ ನಾನ್ ಪಿ. ಡಬ್ಲ್ಯು. ಡಿ. ರೋಡುಗಳು ಏನಿವೆಯೋ ಅವುಗಳಿಗೆ ಬಜೆಟ್ಟಿನಲ್ಲಿ ಲಂಪ್‌ಸಮ್ ಆಗಿ ಹಣವನ್ನು ಒದಗಿಸಿರುತ್ತದೆ. ಆ ಹಣವನ್ನು ಚೀಫ್ ಇಂಜಿನಿಯರು ಸೂಪರಿಂಟೆಂಡೆಂಟ್ ಇಂಜಿನಿಯರುಗಳು ಇರುವ ಸರ್ಕಲ್‌ಗಳಿಗೆ ಹಂಚುತ್ತಾರೆ. ಅವರು ಅದನ್ನು ಡಿವಿಜನ್‌ಗಳಿಗೆ ಪ್ರಪೋರ್ಷನೇಟ್ ಆಗಿ ಹಂಚುತ್ತಾರೆ. ಇದರಲ್ಲಿ ಏನಾಗಿದೆ ಎಂದರೆ, ಆ ಕೆಲಸಕ್ಕೋಸ್ಕರ ಲಂಪ್‌ಸಮ್ ಪ್ರಾವಿಜನ್‌ನಲ್ಲಿ ಎಷ್ಟು ಹಣವನ್ನು ಒದಗಿಸಿದ್ದರೋ ಅಷ್ಟು ಹಣದಲ್ಲೇ ಆ ಕೆಲಸವನ್ನು ಮುಗಿಸಬೇಕಾಗಿತ್ತು. ಆದರೆ ಇಂಜಿನಿಯರು ಕೆಲವು ಒತ್ತಾಯಗಳಿಂದ ಕೆಲವು ಕಡೆ ಜಾಸ್ತಿ ಹಣವನ್ನು ಖರ್ಚುಮಾಡಿ ಆ ಕೆಲಸಗಳನ್ನು ಮಾಡಿಸಿದ್ದಾರೆ. ಆದ್ದರಿಂದ ಕೆಲವುಕಡೆ ನಾನ್ ಪಿ. ಡಬ್ಲ್ಯು. ಡಿ. ರೋಡುಗಳ ಕೆಲಸವನ್ನು ಮಾಡುವುದಕ್ಕೆ ಹಣ ಇಲ್ಲ. ಆದ್ದರಿಂದ ನಾರ್ಮಲ್ ಬಜೆಟ್ಟಿನಲ್ಲಲ್ಲಿಯೇ ಅದಕ್ಕೆ ಸಾಧ್ಯವಿದ್ದಷ್ಟು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಮೊದಲು ಹಿಂದೆ ಪ್ರಾರಂಭಮಾಡಿದಂತಹ ಕೆಲಸಗಳಿಗೆ ಬಜೆಟ್ಟಿನಲ್ಲಿ ಪ್ರತ್ಯೇಕವಾದ ಪ್ರಾವಿಜನ್ ಇರುತ್ತಿತ್ತು. ಈಗೆ ಆದು ಇಲ್ಲ. ಅದರ ನಲುವಾಗಿ ನಾರ್ಮಲ್ ಬಜೆಟ್ಟಿನಲ್ಲಿಯೇ ಆ ಕೆಲಸಕ್ಕೆ ಹಣವನ್ನು ಖರ್ಚು ಮಾಡಿ ಅದನ್ನು ಆದಷ್ಟು ತೀವ್ರವಾಗಿ ಮಾಡಿಕೊಡುತ್ತೇವೆ.

Equation of Peshkars to Sheristedars in Gulbarga Division.

*Q.—179. Sri S. RUDRAPPA (Kalgi).—

Will the Government be pleased to state :—

(*a*) the number of Peshkars in Gulbarga Division who have been equted with the post of Sheristedars ;

(*b*) the additional amount of expenditure involved due to the above equation ?

A.—Sri M. V. KRISHNAPPA (Minister for Revenue).—

(*a*) Sixty-three posts of Peshkars have been equated with the posts of Taluk Sheristedars in G. O. No. RD 241 ENG 64, dated 10th December 1964.

(*b*) About Rs. 31,000 per annum.